ಓ ಎಸ್ ನಂಃ 546/2022
ಪಿ.ಡಬ್ಲ್ಯೂ.2 (ಮಲಕಾರೆಪ್ಪ)

ದಿನಾಂಕ: 19-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ.ಎಂ.ಎನ್.ಸಿ. ಪ್ರತಿವಾದಿ ಪರ ವಕೀಲರಿಂದಃ

ಈ ದಾವೆಯಲ್ಲಿ ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ನಾನು ಪಕ್ಷಗಾರ ಜೊತೆ 2-3 ಬಾರಿ ನ್ಯಾಯಾಲಯಕ್ಕೆ ಬಂದಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣವನ್ನು ನಾನು ಬರುವ ಮೊದಲೆ ಬೆರಳಚ್ಚು ಮಾಡಿ ಇಡಲಾಗಿತ್ತು ಎಂದರೆ ಸರಿ. ನಾನು ಬಂದ ನಂತರ ನನ್ನ ಪ್ರಮಾಣ ಪತ್ರ ತಯಾರ ಇದೆ ಸಹಿ ಮಾಡಿ ಎಂದರು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಾನು ಸುಮಾರು 10-20 ಕರಾರು ಪತ್ರಗಳಿಗೆ ಸಹಿ ಮಾಡಿರುತ್ತೇನೆ. ನನ್ನ ಊರು ಉದಗಟ್ಟಿ ಎಂದರೆ ಸರಿ. ನನಗೆ ಸುಮಾರು ವರ್ಷಗಳಿಂದ ವಾದಿಯರ ಮತ್ತು ಪ್ರತಿವಾದಿಯರ ಪರಿಚಯ ಇದೆ.

2. ಕರಾರು ಪತ್ರದಲ್ಲಿ ನಮೂದಿಸಿದ ಆಸ್ತಿ ಪ್ರತಿವಾದಿಯ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ಹಾಗೂ ಅವರ ಹಿರಿಯರಿಗೆ ಒಕ್ಕಲುತನವೇ ಮೂಲ ಉದ್ಯೋಗ ಆಗಿದ್ದು, ಸದರಿಯವರ ಕುಟುಂಬದಲ್ಲಿ ಯಾವುದೇ ವ್ಯಾಪಾರ ಮಾಡುವುದಿಲ್ಲ ಮತ್ತು ಯಾರಿಗೂ ನೌಕರಿ ಇರುವುದಿಲ್ಲ ಎಂದರೆ ಸರಿ. ದಾವಾ ಜಮೀನು ಘಟಪ್ರಭಾ ನದಿಯಿಂದ ಪೈಪಲೈನ ಮಾಡಿ ನೀರಾವರಿ ಮಾಡಿದ ಜಮೀನು ಎಂದರೆ ಸರಿ. ಪ್ರತಿವಾದಿಯರು ತಮ್ಮ ಜಮೀನಿನಲ್ಲಿ ಕಬ್ಬು ಬೆಳೆಯುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಪ್ರತಿವಾದಿಯರು ಪೂಜೇರಿ ಯವರಿಂದ ಖರೀ ಮಾಡಿದ್ದಾರೆ. ಯಾವ ವರ್ಷದಲ್ಲಿ ಖರೀದಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ನಾನು ಸದರಿ ಜಮೀನು ಖರೀದಿ ಮಾಡಿದ ಖರೀದಿ ಪತ್ರ ನೋಡಿದ್ದೇನೆ, ಅದಕ್ಕೆ ನನ್ನ ಸಹಿ ಇರುತ್ತದೆ.

3. ಪ್ರತಿವಾದಿಯರು ತಮ್ಮ ಜಮೀನುಗಳಿಂದ ಬಂದ ಆದಾಯವನ್ನು ದಾವಾ ಸ್ವತ್ತು ಖರೀದಿ ಮಾಡಲು ವ್ಯಯ ಮಾಡಿದ್ದಾರೆ ಎಂದರೆ ಸರಿ. ಕರಾರು ಪತ್ರದಲ್ಲಿ ನಮೂದಿಸಿರುವ ಜಮೀನು ಮೊದಲಿಗೆ ಒಣಬೇಸಾಯದ ಜಮೀನು ಇತ್ತು ಎಂದರೆ ಸರಿ. ಇತ್ತಿಚೆಗೆ ಪ್ರತಿವಾದಿಯರು ದಾವಾ ಆಸ್ತಿಗೆ ಪೈಪಲೈನ್ ಮಾಡಿಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗೂ ಮತ್ತು ಘಟಪ್ರಭಾ ನದಿಗೂ 3.ಕಿ.ಮೀ ಅಂತರ ಇದೆ. ಈಗ ದಾವಾ ಆಸ್ತಿಯಲ್ಲಿ ಕಬ್ಬು ಬೆಳೆಯಲಾಗುತ್ತದೆ ಎಂದರೆ ಸರಿ. ಪ್ರತಿವಾದಿಯರೆ ದಾವಾ ಆಸ್ತಿಯಲ್ಲಿ ಬೆಳೆದ ಕಬ್ಬನ್ನು ಸಕ್ಕರೆ ಕಾರಖಾನೆಗೆ ಸಾಗಾಟ ಮಾಡುತ್ತಾರೆ ಎಂದರೆ ಸರಿ.

4. 1 ನೇ ಪ್ರತಿವಾದಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆ ಸಿದ್ದಪ್ಪ ಹಾಗೂ ತಾಯಿ ಸಿದ್ದವ್ವ ಇವರಿಗೆ ಇಬ್ಬರು ಮಕ್ಕಳಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯ ಬೆಲೆ ಈಗ ಕಡಿಮೆ ಎಂದರೂ ಎಕರೆಗೆ ರೂ.20.ಲಕ್ಷ ಇದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ರೂ.8 ರಿಂದ 12.ಲಕ್ಷ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿ ನೀರಾವರಿ ಜಮೀನಾಗಿದ್ದರಿಂದ ಮತ್ತು ಫಲವತ್ತಾಗಿದ್ದರಿಂದ ಬೆಲೆ ಜಾಸ್ತಿ ಇದೆ ಎಂದರ ಸರಿಯಲ್ಲ. ಖರೀದಿ ಕಾರಾರು ಪತ್ರದಲ್ಲಿ ದಾವಾ ಜಮೀನು ಸವಳು ಜಮೀನು ಎಂದು ಬರೆಸಿಲ್ಲ. ಖರೀದಿ ಕಾರಾರು ಪತ್ರದಲ್ಲಿ ದಾವಾ ಜಮೀನು ಸವಳು ಜಮೀನು ಎಂದು ಬರೆಸಲು ಯಾವುದೇ ಅಡಚಣೆ ಇರಲಿಲ್ಲ ಎಂದರೆ ಸರಿ.

5. ದಾವಾ ಆಸ್ತಿಯನ್ನು ಮೃತ ಸಿದ್ದಪ್ಪ ಹಾಗೂ ಅವರ ಸಹೋದರರು ಏಕತ್ರ ಕುಟುಂಬದ ಆದಾಯದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿ 2,3 ಇವರ ತಂದೆ ಸಿದ್ದಪ್ಪ ದಾವಾ ಆಸ್ತಿಯ ಕುರಿತು ಬಕ್ಷೀಸ್ ಪತ್ರ ಅಥವಾ ಮೃತ್ಯು ಪತ್ರ ಬರೆದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿ ಮಾರಾಟ

ಮಾಡುತ್ತಿದ್ದ ಬಗ್ಗೆ ನನಗೆ ವಾದಿಯಿಂದ ಗೊತ್ತಾಗಿರತ್ತದೆ. ಪ್ರತಿವಾದಿಯರು ತಾವು ದಾವಾ ಆಸ್ತಿ ಮಾರಾಟ ಮಾಡುತ್ತಿದ್ದೇವೆ ನೀವು ಬರಬೇಕು ಎಂದು ಕರೆಯಲು ನನ್ನ ಮನೆಗೆ ಬಂದಿದ್ದರು. ದಿಃ 26.05.2020 ಕ್ಕಿಂತ 5-6 ದಿವಸ ಮೊದಲು ಪ್ರತಿವಾದಿಯರು ನನ್ನ ಮನೆಗೆ ಬಂದಿದ್ದರು. ತಮಗೆ ಸಾಲ ಹೆಚ್ಚು ಆಗಿದೆ ಜಮೀನು ಕೊಡುತ್ತೇವೆ ಎಂದು ಹೇಳಲು ಬಂದಿದ್ದರು. ಪ್ರತಿವಾದಿಯರು ನನ್ನ ಬಳಿ ಬಂದಾಗ ಯಾರ ಬಳಿ ಸಾಲ ಹೆಚ್ಚಾಗಿದೆ ಎಂದು ವಿಚಾರಿಸಿದಾಗ ಪ್ರತಿವಾದಿಯರು ಲಟ್ಟಿ ಹಾಗೂ ಚಿಗಡೊಳ್ಳಿ ಇವರ ಬಳಿ ಸಾಲ ಹೆಚ್ಚಾಗಿದೆ ಎಂದು ನನಗೆ ತಿಳಿಸಿದರು.

6. ಉದಗಟ್ಟಿ ಗ್ರಾಮದಲ್ಲಿ ಲಟ್ಟಿ ಕುಟುಂಬದವರ ಅಂದಾಜು 50 ಮನೆಗಳಿವೆ ಹಾಗೂ ಚಿಗಡೊಳ್ಳಿ ಕುಟುಂಬದ 10-15 ಮನೆಗಳಿವೆ ಎಂದರೆ ಸರಿ. ಸಾಲ ತೆಗೆದುಕೊಂಡವರ ಬಳಿ ಪ್ರತಿವಾದಿಯರು ಕರಾರು ಪತ್ರ ನೋಂದ ಮಾಡಿಕೊಟ್ಟಿದ್ದರು. ನಾನು ಯಾವ ಜಮೀನುಗಳಿಗೆ ಕರಾರು ಪತ್ರ ನೋಂದ ಮಾಡಿಕೊಟ್ಟಿದ್ದಾರೆ ಎಂದು ನೋಡಿಲ್ಲ. ಎಷ್ಟು ಸಾಲ ತೆಗೆದುಕೊಂಡಿದ್ದಾರೆ ಮತ್ತು ಅದಕ್ಕೆ ಎಷ್ಟು ಬಡ್ಡಿಯಾಗಿದೆ ಎಂದು ನಾನು ನೋಡಿಲ್ಲ. ಪ್ರತಿವಾದಿಯರು ಲಟ್ಟಿ ಮತ್ತು ಚಿಗಡೊಳ್ಳಿ ಇವರಿಗೆ ಏನು ಎಂದು ಹೇಳಿ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದರು ಎಂದು ನನಗೆ ವಾಹಿತಿ ಇಲ್ಲ. ಸದರಿಯವರಿಂದ ಪಡೆದ ಸಾಲವನ್ನು ದಾವಾ ಆಸ್ತಿಯ ಕರಾರು ಪತ್ರ ನೋಂದ ಮಾಡುವ ಕಾಲಕ್ಕೆ ವಾಪಸ ಕೊಟ್ಟಿರುತ್ತಾರೆ. ಆ ನಂತರ ಲಟ್ಟಿ ಮತ್ತು ಚಿಗಡೊಳ್ಳಿ ಇವರಿಗೆ ಬರೆದುಕೊಟ್ಟ ಖರೀದಿ ಕರಾರು ಪತ್ರ ರದ್ದು ಮಾಡಿಸಿಕೊಂಡಿರುತ್ತಾರೆ.

7. ಲಟ್ಟಿ ಮತ್ತು ಚಿಗಡೊಳ್ಳಿ ಇವರಿಗೆ ಬರೆದುಕೊಟ್ಟ ಖರೀದಿ ಕರಾರು ಪತ್ರಗಳನ್ನು ಮತ್ತು ಖರೀದಿ ಕರಾರು ಪತ್ರ ರದ್ದತಿ ಪತ್ರಗಳನ್ನು ನಾನು ನೋಡಿಲ್ಲ ಹಾಗೂ ನನಗೆ ಸದರಿ ದಾಖಲೆಗಳನ್ನು ನೋಡಲು ಯಾವುದೇ ತೊಂದರೆ ಇರಲಿಲ್ಲ.

ಈ ದಾವಾ ಆಸ್ತಿಯ ಖರೀದಿ ಕರಾರು ಪತ್ರದಲ್ಲಿ ಲಟ್ಟಿ ಮತ್ತು ಚಿಗಡೊಳ್ಳಿ ಇವರಿಂದ ಪಡೆದ ಸಾಲ ತೀರಿಸುವುದಕ್ಕಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡುತ್ತಿದ್ದೇವೆ ಎಂದು ಬರೆಯಲು ಏನು ತೊಂದರೆ ಇರಲಿಲ್ಲ. ಖರೀದಿ ಕರಾರು ಪತ್ರಕ್ಕೆ ಅವರ ಹೆಂಡತಿ ಮಕ್ಕಳು ಮತ್ತು ಮೃತ ಸಿದ್ದಪ್ಪ ಹಾಗೂ ಅವರ ಹೆಂಡತಿ ಮಕ್ಕಳು ಇವರ ಒಪ್ಪಿಗೆಯನ್ನು ಪಡೆದಿಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳ ಮತ್ತು ಮೃತ ಸಿದ್ದಪ್ಪ ಹಾಗೂ ಅವರ ಹೆಂಡತಿ ಮಕ್ಕಳ ಹಕ್ಕು ಇದ್ದ ಬಗ್ಗೆ ನನಗೆ ಮಾಹಿತಿ ಇದೆ.

8. ಖರೀದಿ ಕರಾರು ಪತ್ರ ಆಗುವಾಗ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳ ಮತ್ತು ಮೃತ ಸಿದ್ದಪ್ಪ ಹಾಗೂ ಅವರ ಹೆಂಡತಿ ಮಕ್ಕಳನ್ನು ಕರೆದು ವಿಚಾರಿಸಿಲ್ಲ. ಖರೀದಿ ಕರಾರು ಪತ್ರವನ್ನು ಗುರುಸಿದ್ದೇಶ್ವರ ದೇವಸ್ಥಾನದಲ್ಲಿ ಬರೆದುಕೊಡಲು ಮಾತನಾಡಲಾಯಿತು. ದಿಃ26.05.2020 ರಂದು ಖರೀದಿ ಮಾತುಕತೆಯ ಬಗ್ಗೆ ಎಲ್ಲರೂ ಸೇರಿದ್ದೇವು. ನಾನು ವಡೆಯರ ಅಂದರೆ ಪ್ರತಿವಾದಿಯರ ಪರವಾಗಿ ಹೋಗಿದ್ದೆ. ವಾದಿಯರ ಪರವಾಗಿ ಸಿದ್ದಪ್ಪ ಕರೆಪ್ಪ ಕಳ್ಳಿಗುದ್ದಿ ಮುತ್ತೆಪ್ಪ ಶಂಕರ ವಡೆಯರ, ಬಸಲಿಂಗಪ್ಪ ಶಿಗಿಹಳ್ಳಿ, ಶಿವರಾಯ ಹುಲಿ, ಇನ್ನೂ ಅನೇಕ ಜನ ಬಂದಿದ್ದರು. ಮಾತುಕತೆಗೆ ಮಧ್ಯಾಹ್ನ 2 ರಿಂದ 3 ಗಂಟೆ ಸಮಯಕ್ಕೆ ಕೂಡಿದ್ದೇವು. ಮಾತುಕತೆ ಸಮಯದಲ್ಲಿ ಪ್ರತಿವಾದಿಯರು ರೂ.18.ಲಕ್ಷಕ್ಕೆ ದಾವಾ ಆಸ್ತಿ ಮಾರಾಟ ಮಾಡುವುದಾಗಿ ಹೇಳಿದರು, ವಾದಿ ರೂ.16.ಲಕ್ಕಕ್ಕೆ ದಾವಾ ಆಸ್ತಿ ಖರೀದಿ ಮಾಡುವುದಾಗಿ ಹೇಳಿದರು. ಮಾತುಕತೆ ಆಗಿ ದಾವಾ ಆಸ್ತಿಗೆ ರೂ.16.ಲಕ್ಷ ಬೆಲೆ ನಿಗಧಿಪಡಿಸಲಾಯಿತು.

9. ಮಾತುಕತೆ ಆದ ದಿನ ಯಾವುದೇ ದಾಖಲೆ ಮಾಡಿ ಮುಂಗಡ ಹಣ ಕೊಟ್ಟಿಲ್ಲ. ವಾದಿಯು ಬ್ಯಾಂಕಿನಿಂದ ಹಣ ತರಬೇಕಾಗಿತ್ತು ಆ ದಿನ ವಾದಿ ಹಣ

ತಂದಿರಲಿಲ್ಲ, ಆದ್ದರಿಂದ ಮುಂಗಡವಾಗಿ ಏನು ಹಣ ಕೊಟ್ಟಿರಲಿಲ್ಲ. ಕರಾರು ಆದ ದಿನ ಕರಾರು ಪತ್ರ ಬರೆದು ಮುಂಗಡ ಹಣ ಕೊಡುತ್ತಾರೆ ಎನ್ನುವ ವಿಷಯ ನನಗೆ ಮಾಹಿತಿ ಇದೆ. ಖರೀದಿ ಕರಾರು ಪತ್ರ ಬರೆದುಕೊಡಲು ದಿಃ08.06.2020 ಎಂದು ನಿರ್ಧರಿಸಲಾಗಿತ್ತು. ದಿಃ08.06.2020 ರಂದು ವಾದಿ ಮತ್ತು ಪ್ರತಿವಾದಿಯರು ಹಾಗೂ ಮಾತುಕತೆಗೆ ಸೇರಿದ ಎಲ್ಲ ಹಿರಿಯರು ಬಂದಿದ್ದರು. ಸದರಿಯವರೆಲ್ಲರೂ ದಸ್ತು ಬರಹಗಾರರಾದ ಆನಂದ ಗೋಟಡಕಿ ಇವರ ಕಚೇರಿಗೆ ಬಂದಿದ್ದರು. ಆಗ ಮಧ್ಯಾಹ್ನ 12 ರಿಂದ 2 ಗಂಟೆಯಾಯಿತು. ನಾವೆಲ್ಲರೂ ಹೋದಾಗ ದಸ್ತು ಬರಹಗಾರರು ಖಾಲಿ ಇದ್ದರು.

11. ಖರೀದಿ ಕರಾರು ಪತ್ರ ಬರೆಯುವ ಸಮಯದಲ್ಲಿ ವಾದಿಯರು ರೂ.15 ಲಕ್ಷ ತೆಗೆದುಕೊಂಡು ಬಂದಿದ್ದರು. ವಾದಿಗೆ ರೂ.15 ಲಕ್ಷ ಎಲ್ಲಿಂದ ತಂದಿದ್ದೀರಿ ಎಂದು ವಿಚಾರಿಸಿದಾಗ ತಮ್ಮ ಕಬ್ಬಿನ ದುಡ್ಡು ಬ್ಯಾಂಕ ಖಾತೆಯಲ್ಲಿ ಇತ್ತು ಅದನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳಿದರು. ರೂ.15.ಲಕ್ಷ ಹಣವನ್ನು ಆನಂದ ಗೋಟಡಕಿ ಇವರ ಕಚೇರಿಯಲ್ಲಿ ಪ್ರತಿವಾದಿಯರಿಗೆ ಕೊಟ್ಟಿರುತ್ತೇವೆ, ಆಗ ಆನಂದ ಗೋಟಡಕಿಯವರು ಸಹ ಹಾಜರಿದ್ದರು. ವಾದಿ ತಂದ ದುಡ್ಡು ಎನಿಸಿ ಪ್ರತಿವಾದಿಗೆ ಕೊಡಲು ಅಂದಾಜು ಮಧ್ಯಾಹ್ನ 3 ರಿಂದ 3.30 ಗಂಟೆ ಆಗಿತ್ತು. ಕಾಗದ ಪತ್ರವನ್ನು ಪೆನ್ನಿನಿಂದ ಬರೆದು ಕಂಪ್ಯೂಟರನಲ್ಲಿ ತಯಾರ ಮಾಡಲಾಯಿತು. ಎಷ್ಟು ಮುಖ ಬೆಲೆಯ ಛಾಪಾ ಕಾಗದ ಇತ್ತು ಎಂದು ನಾನು ನೋಡಿಲ್ಲ.

12. ಖರೀದಿ ಕರಾರು ಪತ್ರದಲ್ಲಿ ಖರೀದಿ ಪತ್ರ ಆಗುವಾಗ 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ಮತ್ತು ಮೃತ ಸಿದ್ದಪ್ಪ ಇವರ ಹೆಂಡತಿ ಮಕ್ಕಳು ಬಂದು ಸಹಿ ಮಾಡಬೇಕೆಂದು ನಾನು ಬರೆಸಿಲ್ಲ. ಈ ವಿಷಯವನ್ನು ದಸ್ತು ಬರಹಗಾರರಿಗೆ ಹೇಳಿರುತ್ತೇವೆ. ದಸ್ತು ಬರಹಗಾರರು ಖರೀದಿ ಪತ್ರ

ಬರೆದುಕೊಡವಾಗ 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ಮತ್ತು ಮೃತ ಸಿದ್ದಪ್ಪ ಇವರ ಹೆಂಡತಿ ಮಕ್ಕಳು ಸಹಿ ಮಾಡಬೇಕೆಂದು ಹೇಳಿದರು. ಖರೀದಿ ಕರಾರು ಪತ್ರ ಬರೆಯುವಾಗ ಖರೀದಿ ಪತ್ರದಲ್ಲಿ 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ಮತ್ತು ಮೃತ ಸಿದ್ದಪ್ಪ ಇವರ ಹೆಂಡತಿ ಮಕ್ಕಳು ಸಹಿ ಮಾಡಿಸಬೇಕೆಂದು ದಸ್ತು ಬರಹಗಾರರಿಗೆ ಹೇಳಲಾಯಿತು. ಖರೀದಿ ಕರಾರು ಪತ್ರ ಬರೆದ ನಂತರ ಓದಿ ಹೇಳುವಾಗ ಖರೀದಿ ಪತ್ರಕ್ಕೆ 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳು ಮತ್ತು ಮೃತ ಸಿದ್ದಪ್ಪ ಇವರ ಹೆಂಡತಿ ಮಕ್ಕಳು ಸಹಿ ಮಾಡಿಸಬೇಕೆಂದು ಹೇಳಿರುತ್ತಾರೆ. ಈ ವಿಷಯವನ್ನು ನಾನು ಓದಿ ಹೇಳುವಾಗ ಸ್ವತಃ ಕೇಳಿರುತ್ತೇನೆ. ಈ ವಿಷಯವನ್ನು ಹೊರತುಪಡಿಸಿ ಬೇರೆ ಯಾವ ಮಾತುಕತೆ ಅಗಿಲಿಲ್ಲ.

13. ಗುರುಸಿದ್ದೇಶ್ವರ ದೇವಸ್ಥಾನದಲ್ಲಿ ಆದ ಮಾತುಕತೆಯನ್ನು ಹೊರತುಪಡಿಸಿ ಖರೀದಿ ಕರಾರು ಪತ್ರದಲ್ಲಿ ಬೇರೆ ಏನು ಬರೆದಿಲ್ಲ. ಖರೀದಿ ಕರಾರು ಪತ್ರದಲ್ಲಿ ದಸ್ತು ಬರಹಗಾರರು ತಮ್ಮ ಸಮಕ್ಷಮ ರೂ.15 ಲಕ್ಷ ಎನಿಸಿ ಕೊಡಲಾಗಿದೆ ಎಂದು ಬರೆದು ಓದಿ ಹೇಳಿರುತ್ತಾರೆ. ಖರೀದಿ ಕರಾರು ಪತ್ರ ತಯಾರ ಮಾಡಿ ಪಕ್ಷಗಾರರ ಕೈಯಲ್ಲಿ ಕೊಟ್ಟು ಉಪ-ನೋಂದಣಾಧಿಕಾರಿಗಳ ಕಚೇರಿಗೆ ಕಳಿಸಿರುತ್ತಾರೆ. ಉಪ-ನೋಂದಣಾಧಿಕಾರಿಗಳು ದಸ್ತು ಬರಹಗಾರರ ಕಚೇರಿಯಲ್ಲಿ ರೂ.15 ಲಕ್ಷ ಕೊಟ್ಟಿದ್ದಾರೊ ಇಲ್ಲೋ ಎಂದು ಕೇಳಿರುತ್ತಾರೆ. ನಂತರ ಪಕ್ಷಗಾರರ ಭಾವ ಚಿತ್ರ ಹಚ್ಚಿ ಕರಾರು ಪತ್ರ ನೋಂದಣಿ ಆಗಿರುತ್ತದೆ. ಅದೇ ದಿನ ಸಂಜೆ 5 ರಿಂದ 6 ಗಂಟೆಗೆ ಖರೀದಿ ಕರಾರು ಪತ್ರ ನಮಗೆ ಕೊಟ್ಟಿರುತ್ತಾರೆ.

14. ಖರೀದಿ ಕರಾರು ಪತ್ರ ಆದ ನಂತರ ಪ್ರತಿವಾದಿಯರಿಗೆ ನಾನು ಬೇಟಿಯಾಗುತ್ತಿದ್ದೆ. ಕರಾರು ಪತ್ರ ಆದ 1 ತಿಂಗಳ ನಂತರ ನಾನು ಪ್ರತಿವಾದಿಯರಿಗೆ

ಭೇಟಿಯಾಗಿರುತ್ತೇನೆ. ನಾನು ಪ್ರತಿವಾದಿಯರಿಗೆ ಯಾವ ಯಾವ ದಿನಾಂಕದಂದು ಭೇಟಿಯಾಗಿದೆ ಎಂದು ನೆನಪಿಲ್ಲ. ದಾವಾ ಆಸ್ತಿಯ ಉತಾರ 1 ನೇ ಪ್ರತಿವಾದಿ, ಮೃತ ಸಿದ್ದಪ್ಪ ಹಾಗೂ ಹಾಲಪ್ಪ ಇವರ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ. ಖರೀದಿ ಕರಾರು ಪತ್ರಕ್ಕೆ ಅಪರಾಯಪ್ಪ ಹಾಗೂ ಹಾಲಪ್ಪ ಇವರ ಸಹಿ ಪಡೆದಿಲ್ಲ. ಅವ್ವಣ್ಣಾ, ಸಿದ್ದಪ್ಪ, ಅಪರಾಯಪ್ಪ ಹಾಗೂ ಹಾಲಪ್ಪ ಇವರ ನಡುವೆ ಇನ್ನೂ ಪಾಲು ಆಗಿಲ್ಲ ಎಂದರೆ ಸರಿ. ಖರೀದಿ ಕರಾರು ಪತ್ರದ ಮಾತುಕತೆ ಆಗುವ ಸಮಯದಲ್ಲಿ ಹಾಲಪ್ಪ ಮತ್ತು ಅಪರಾಯಪ್ಪ ಇವರನ್ನು ಕರೆಸಿ ವಿಚಾರಿಸಿರುತ್ತೇನೆ. ಖರೀದಿ ಕರಾರು ಪತ್ರಕ್ಕೆ ಅಪರಾಯಪ್ಪ ಮತ್ತು ಹಾಲಪ್ಪ ಇವರ ಸಹಮತಿ ಇದೆ ಎಂದು ಅವರ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ.

15. ಗುರುಸಿದ್ದೇಶ್ವರ ಗುಡ್ಡದ ಪೂರ್ವಕ್ಕೆ ನಮ್ಮ ಜಮೀನು ಇವೆ. ಪಶ್ಚಿಮಕ್ಕೆ ಪ್ರತಿವಾದಿಯರ ಜಮೀನು ಇವೆ. ನಮ್ಮ ಜಮೀನಿನಿಂದ ಗೋಕಾಕ-ಉದಗಟ್ಟಿ ರಸ್ತೆಗೆ ಸೇರಲು ಪ್ರತಿವಾದಿಯರ ಜಮೀನಿನಲ್ಲಿ ಹಾಯ್ದು ಬರಬೇಕು ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜಮೀನಿನಲ್ಲಿ ಅತಿಕ್ರಮಣ ಪ್ರವೇಶ ಮಾಡಿ ದಾರಿ ಮಾಡಲು ಪ್ರಯತ್ನ ಪಟ್ಟ ಬಗ್ಗೆ ಕುಲಗೋಡ ಪೋಲೀಸ್ ಠಾಣೆಯಲ್ಲಿ ನನ್ನ ಮೇಲೆ ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ದಾರಿ ವಿಚಾರವಾಗಿ ನಮ್ಮ ಮತ್ತು ಪ್ರತಿವಾದಿಯರ ನಡುವೆ ಸಂಬಂಧ ಸರಿ ಇಲ್ಲ ಎಂದರೆ ಸರಿಯಲ್ಲ.

16. ಖರೀದಿ ಕರಾರು ಆಗುವ ಸಮಯದಲ್ಲಿ ಉತಾರವು ಜಂಟಿಯಾಗಿತ್ತು, ವಾಟ್ನಿಯಾಗಿ 11-ಇ ನಕಾಶೆ ತಯಾರು ಮಾಡಿ ಕೊಟ್ಟ ನಂತರ ಖರೀದಿ ಪತ್ರ ಮಾಡಿಕೊಡಬೇಕೆಂತಿದ್ದರಿಂದ ಖರೀದಿ ಕರಾರು ಪತ್ರ ಆದ ದಿನವೇ ಖರೀದಿ ಪತ್ರ ಮಾಡಿಕೊಂಡಿರಲಿಲ್ಲ. ಖರೀದಿ ಮಾಡುವವರು ಮತ್ತು ಖರೀದಿ ತೆಗೆದುಕೊಳ್ಳುವವರು ಜಂಟಿಯಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಕೊಟ್ಟಾಗ

11-ಇ ನಕಾಶೆ ಮಾಡುತ್ತಾರೆ ಎಂದರೆ ಸರಿ. 11-ಇ ನಕಾಶೆ ಪಡೆಯಲು ಜಂಟಿಯಾಗಿ ಇನ್ನೂ ಅರ್ಜಿ ಕೊಟ್ಟಿರುವುದಿಲ್ಲ.

ನ್ಯಾಯಾಲಯದ ಸಮಯ ಮುಗಿದಿದ್ದರಿಂದ, ಪಾಟೀಸವಾಲನ್ನು 3 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ

ದಿನಾಂಕ: 19-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲುಃ ಶ್ರೀ.ಎಂ.ಎಸ್.ಸಿ. ಪ್ರತಿವಾದಿಯರ ಪರ ವಕೀಲರಿಂದಃ</u>

17. ಪ್ರತಿವಾದಿಯರಿಗೆ 11-ಇ ನಕಾಶೆ ತಯಾರ ಮಾಡಿಕೊಡಲು ನಾನೇ ಹೇಳಿರುತ್ತೇನೆ. ಕರಾರು ಪತ್ರ ಆದ 4-5 ತಿಂಗಳ ನಂತರ ನಾನು ಪ್ರತಿವಾದಿಯರಿಗೆ 11-ಇ ನಕಾಶೆ ತಯಾರ ಮಾಡಿಕೊಡಲು ಹೇಳಿದ್ದೆನು. ಪ್ರತಿವಾದಿಯರು 11-ಇ ನಕಾಶೆ ಯಾಕೆ ತಯಾರು ಮಾಡಿಕೊಡಲಿಲ್ಲ ಎಂದು ನನಗೆ ಗೊತ್ತಿಲ್ಲ. 4-5 ತಿಂಗಳ ನಂತರ ನಾನು ಪ್ರತಿವಾದಿಯರಿಗೆ 11-ಇ ನಕಾಶೆಯ ಬಗ್ಗೆ ನಾನು ಕೇಳಿಲ್ಲ. ವಾದಿ ಬಾಕಿ ಉಳಿದ ರೂ.1 ಲಕ್ಷ ಹಾಗೂ ಖರೀದ ಪತ್ರ ಮಾಡಿಕೊಳ್ಳಲು ಬೇಕಾದಂತಹ ದುಡ್ಡು ತಯಾರ ಇದೆ ಎಂದು ನನಗೆ ತೋರಿಸಿಲ್ಲ. ನಾನು ವಾದಿಗೆ ಬಾಕಿ ಉಳಿದ ಹಣದ ವ್ಯವಸ್ಥ ಮಾಡಿಕೊಳ್ಳಲು ಹಾಗೂ ಖರೀದಿ ಪತ್ರಕ್ಕೆ ಬೇಕಾಗುವ ಹಣ ಹೊಂದಿಸಿಕೊಳ್ಳು ಎಂದು ಹೇಳಿದ್ದೆ. ವಾದಿಗೆ ಪ್ರತಿವಾದಿಯರು 11-ಇ ನಕಾಶೆ ಮಾಡಿಕೊಡದಿದ್ದಾಗ ತಮ್ಮ ಬಳಿ ಹಣ ಇದೆ, ಖರೀದಿ ಪತ್ರ ಪ್ರತಿವಾದಿಯರು ಮಾಡಿಕೊಡುತ್ತಿಲ್ಲ ಎಂದು ಹೇಳಿ ದಾವೆ ಮಾಡಲು ವಾದಿಗೆ ಯಾವುದೇ ತೊಂದರೆ ಇರಲಿಲ್ಲ.

18. ನಾನು ಮತ್ತು ಇತರೇ ಹಿರಿಯರು ಸೇರಿ ವಾದಿ ಹಾಗೂ ಪ್ರತಿವಾದಿಯರಿಗೆ ಕರೆದು 11-ಇ ನಕಾಶೆ ಮಾಡಿಸಿಕೊಳ್ಳಲು ಹೇಳಿದ್ದೇವು. ಸದರಿಯವರನ್ನು ಸರ್ವೆ ಕಚೇರಿಗೆ ಕರೆದುಕೊಂಡು ಬಂದು ಅರ್ಜಿ ಕೊಡಿಸಲು

ನಾನು ಪ್ರಯತ್ನಿಸಿಲ್ಲ. ವಾದಿ ಊರಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾರೆ ಹಾಗೂ ಅವರಿಗೆ ಬಡ್ಡಿ ವ್ಯವಹಾರ ಮಾಡಲು ಲೈಸನ್ಸ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ತಮ್ಮ ಹೊಲಕ್ಕೆ ಪೈಪಲೈನ ಮಾಡಿಸಲು ಹಣದ ಅವಶ್ಯಕತೆ ಇದ್ದಾಗ ಒಂದು ದಾಖಲೆಯನ್ನು ಮಾಡಿ ನನ್ನ ಬಳಿ ಕೊಟ್ಟಿದ್ದರು, 2-3 ದನಗಳ ನಂತರ ನಾನು ಆ ದಾಖಲೆಯನ್ನು ಅದಲು-ಬದಲು ಮಾಡಿ ಖರೀದಿ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಕಾರಣದಿಂದಲೇ ಪ್ರತಿವಾದಿಯರು 11-ಇ ನಕಾಶೆ ಮಾಡಿಲ್ಲ ಹಾಗೂ ಪ್ರತಿವಾದಿಯರು ವಾದಿಗೆ ತಾವು ಪಡೆದ ಹಣವನ್ನು ಬಡ್ಡಿ ಸಮೇತ ವಾಪಸು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

19. ವಾದಿಯ ವಕೀಲರು ಕೊಟ್ಟ ನೋಟೀಸಿಗೆ ಪ್ರತಿವಾದಿಯರು ಉತ್ತರ ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ದಿಃ13.12.2021 ರಂದು ಪ್ರತಿವಾದಿ ವಾದಿಗೆ ಬರೆದುಕೊಟ್ಟ ಭದ್ರತೆ ಪತ್ರವನ್ನು ರದ್ದು ಮಾಡಲು ವಾದಿ ಮತ್ತು ಪ್ರತಿವಾದಿಯರು ದಸ್ತು ಬರಹಗಾರರಿಗೆ ಮಾಹಿತಿ ಕೊಟ್ಟ ಪ್ರಕಾರ ದಸ್ತು ಬರಹಗಾರರು ರದ್ದತಿ ಪತ್ರವನ್ನು ಬರೆದಿರುತ್ತಾರೆ ಎಂದರೆ ಈ ವಿಷಯ ನನಗೆ ಗೊತ್ತಿಲ್ಲ. ರದ್ದತಿ ಪತ್ರ ಬರೆಸಿಕೊಳ್ಳಲು ಕಟ್ಟಬೇಕಾದ ಮೊತ್ತವನ್ನು ಪ್ರತಿವಾದಿಯರು ಸರಕಾರಕ್ಕೆ ತುಂಬಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ಜಮೀನಿನಲ್ಲಿ ನನಗೆ ಓಡಾಡಲು ದಾರಿ ಕೊಡದೇ ಇದ್ದಿದ್ದರ ಸಿಟ್ಟಿನಿಂದ ಪ್ರತಿವಾದಿಯರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ